





ಬೈಕ್‌ನಲ್ಲಿ ಬರುತ್ತಿದ್ದ ಇಬ್ಬರು ಯುವಕರು ರಸ್ತೆ ಬದಿಯಲ್ಲಿ ದನ ಮೇಯಿಸುತ್ತಿದ್ದ ನಿಂಗನ ಬಳಿ ನಿಂತು ಕೇಳಿದರು.

**ಯುವಕ:** ಇಲ್ಲಿ, ಹತ್ತಿರದಲ್ಲಿ ಒಳ್ಳೆ ಬಾಳೆ ಎಲೆ ಊಟ ಎಲ್ಲಿ ಸಿಗುತ್ತೆ?

**ನಿಂಗ:** ಇಲ್ಲೆ ಕೊಂಚ ದೂರ ಬಾಳೆತೋಟ ಅಯ್ತೆ. ಅಲ್ಲೇ ಉಣ್ಣೋಗಿ.

---

ಮೊಬೈಲ್‌ನ ಎರಡು ಮಹತ್ವಗಳನ್ನು ಬರೆಯಿರಿ ಎಂಬ ಪ್ರಶ್ನೆಗೆ ಓರ್ವ ವಿದ್ಯಾರ್ಥಿ ಬರೆದ ಉತ್ತರ ಹೀಗಿತ್ತು.

1) ಮೊಬೈಲ್‌ನಿಂದಾಗಿ ಎಲ್ಲರೂ ತಲೆ ತಗ್ಗಿಸಿ ಕೂರುವಂತಾಗಿದೆ.

2) ಮೊಬೈಲ್‌ನಿಂದಾಗಿ ಎಲ್ಲರೂ ತಲೆ ತಗ್ಗಿಸಿ ನಡೆಯುವಂತಾಗಿದೆ.

---

**ಹೆಂಡತಿ:** ಒಂದ್ ರೂಪಾಯಿ, ಎರಡ್ ರೂಪಾಯಿ ಕಾಯಿನ್‌ಗಳು ಇದ್ದರೆ ಕೊಡ್ರಿ?

**ಗಂಡ:** ಏನಕ್ಕೆ?

**ಹೆಂಡತಿ:** ಸಾಂಬಾರ್‌ಗೆ ಹಾಕೋಕೆ.

**ಗಂಡ:** ಸಾಂಬಾರ್‌ಗೆ ಕಾಯಿನ್ ಹಾಕೋದಾ?

**ಹೆಂಡತಿ:** ಹೌದು, ನೀವೆ ಅಲ್ವಾ ಸಾಂಬಾರ್‌ನಲ್ಲಿ ಚೇಂಜ್ ಬೇಕು ಅಂತ ಪದೇ ಪದೇ ಕೇಳೋದು.

---

**ಮೇಷ್ಟ್ರು:** ಹೇಮಂತ, ಎರಡೆಂಟ್ಲಾ ಎಷ್ಟೋ?

**ಹೇಮಂತ:** ಹದಿನೆಂಟು ಸರ್!

**ಮೇಷ್ಟ್ರು:** ನಾನೇಳಿಕೊಟ್ಟದ್ದು ಹದಿನಾರು ಅಲ್ವೇನೋ?

**ಹೇಮಂತ:** ಅಯ್ಯೋ ಮೇಷ್ಟ್ರೇ 'ಗುರುವನ್ನು ಮೀರಿಸೋ ಶಿಷ್ಯ ಆಗ್ಬೇಕು' ಅಂತ ನೀವೆ ಹೇಳ್ತಿದ್ರಿ ಅಲ್ವಾ. ಅದ್ಕೆ ನಾನೇ ಎರಡ್ ಸೇರಿಸಿ ಹೇಳಿದ್ದೀನಿ.

---

**ನಂಜುಂಡ:** ಶಕ್ತಿ ಯೋಜನೆಯಿಂದ ಮಹಿಳೆಯರಿಗೆ ಶಕ್ತಿ ಬಂದಂತಾಗಿ ಓಡಾಟ ಜಾಸ್ತಿಯಾಗಿದೆ. ಏನಂತೀಯಾ?

**ಕೋದಂಡ:** ಸದ್ಯ ನನ್ನಾಕೆಯ ಓಡಾಟದಿಂದ ಸದ್ಯ ನಾನೊಂದು ಚೂರು ಉಸಿರಾಡುವಂತಾಗಿದೆ. ಹ್ಯಾಟ್ಸಾಫ್ ಟು ಶಕ್ತಿ ಯೋಜನೆ.

---

**ಕೋದಂಡ:** ಹೆಂಡ್ತಿ ಬಂದ ಮೇಲೆ ಮುಖ್ಯವಾಗಿ ಏನ್ ಬದಲಾಗುತ್ತೆ?

**ನಂಜುಂಡ:** ಬುದ್ಧಿ.

**ಕೋದಂಡ:** ಅದಕ್ಕೂ ಮೊದಲು?

**ನಂಜುಂಡ:** ಸ್ವಂತ ಬುದ್ಧಿ ಇರುತ್ತೆ.

---

ಹೊಸದಾಗಿ ಹೋಟೆಲ್ ಶುರು ಮಾಡಿದ್ದ ರಾಜಶೇಖರನನ್ನು ಆತನ ಆಪ್ತಮಿತ್ರ ಸೋಮಶೇಖರ ಹೀಗೆ ಕೇಳಿದ.

**ಸೋಮಶೇಖರ:** ನಿನ್ನ ಹೋಟೆಲ್‌ನಲ್ಲಿ ಉಚಿತವಾಗಿ ಏನ್ ಸಿಗುತ್ತೆ?

**ರಾಜಶೇಖರ್:** ಬಿಲ್ ಸಿಗುತ್ತೆ.

---

**ಕೋದಂಡ:** ಇಂದಿನ ಸಿನಿಮಾಗಳಿಗೂ ಹಿಂದಿನ ಸಿನಿಮಾಗಳಿಗೂ ವ್ಯತ್ಯಾಸವೇನು?

**ನಂಜುಂಡ:** ಹಿಂದಿನ ಸಿನಿಮಾಗಳು ಓಡ್ತಾ ಇದ್ವು, ಇಂದಿನವು ವೃಥಾ ತಿರುಗ್ತಿವೆ.

**ಕೋದಂಡ:** ಅದು ಹೇಗೆ?

**ನಂಜುಂಡ:** ಇಂದಿನ ಸಿನಿಮಾಗಳು 'ಪ್ಯಾನ್ ಇಂಡಿಯಾ' ಸಿನಿಮಾಗಳು ಅಲ್ವೆ ಅದಕ್ಕೆ...

---

ಸಮಾಜ ವಿಜ್ಞಾನ ಪಾಠ ಮಾಡುತ್ತಿದ್ದ ಮೇಷ್ಟ್ರು ಮಂಜನಿಗೆ ಹೀಗೆ ಕೇಳಿದರು.

**ಮೇಷ್ಟ್ರು:** ಬ್ರಿಟಿಷರು ಭಾರತಕ್ಕೆ ಯಾವಾಗ ಬಂದರು?

**ಮಂಜ:** ಅವ್ರು ಬಂದಿದ್ದೂ ಆಯ್ತು, ಹೋಗಿದ್ದೂ ಆಯ್ತು. ಈಗ್ಯಾಕ್ ಅದು.

ಸಂಗ್ರಹ: ಮಲ್ಲಿಕಾರ್ಜುನ ಸುರಧೇನುಪುರ